# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ಕ್ರ.ಸಂ.ನಸದೊ/ಸಾ.ಸ./04/2009-10 ದಿನಾಂಕ:05-04-2010

## -:: ¸ÁªÀiÁ£Àå ¸À¨sÉ £ÀqÀªÀ½PÉUÀ¼ÀÄ::-

ದಿನಾಂಕ:12-03-2010ರಂದು ಶುಕ್ರವಾರ ಬೆಳಗ್ಗೆ 11.00 ಗಂಟೆಗೆ ನಗರಸಭೆಯ ಸಭಾಂಗಣದಲ್ಲಿ ಮಾನ್ಯ ನಗರಸಭಾ ಅಧ್ಯಕ್ಷರಾದ ಶ್ರೀ ಎನ್.ಮಲ್ಲಿಕಾರ್ಜುನರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದ ಸಾಮಾನ್ಯ ಸಭೆಯನ್ನು ಕಾರಣಾಂತರಗಳಿಂದ ಮುಂದೂಡಿದ್ದು, ಸದರಿ ಸಭೆಯನ್ನು ದಿನಾಂಕ:05-04-2010ರಂದು ಸೋಮವಾರ ಬೆಳಗ್ಗೆ 11.00 ಗಂಟೆಗೆ ನಗರಸಭೆಯ ಸಭಾಂಗಣದಲ್ಲಿ ಮಾನ್ಯ ನಗರಸಭಾ ಅಧ್ಯಕ್ಷರಾದ ಶ್ರೀ ಎನ್.ಮಲ್ಲಿಕಾರ್ಜುನರವರ ಅಧ್ಯಕ್ಷತೆಯಲ್ಲಿ ಸಾಮಾನ್ಯ ಸಭೆಯನ್ನು ಕರೆಯಲಾಗಿದ್ದು, ಈ ಸಭೆಯಲ್ಲಿ ಮಾನ್ಯ ಉಪಾಧ್ಯಕ್ಷರು, ಮಾನ್ಯ ಸದಸ್ಯರುಗಳು ಹಾಗೂ ಮಾನ್ಯ ನಾಮನಿರ್ದೇಶಿತ ಸದಸ್ಯರುಗಳವರ ಸಮ್ಮುಖದಲ್ಲಿ ನಡೆದ ಸಾಮಾನ್ಯ ಸಭೆಯ ನಡವಳಿಕೆಗಳು:-

<u>ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ:</u>

| | ಹಾಜರಿ | ಗೈರು ಹಾಜರಿ | ಒಟ್ಟು |
|---|---|---|---|
| ಸದಸ್ಯರುಗಳು | 27 | 04 | 31 |
| ನಾಮ ನಿರ್ದೇಶಿತ ಸದಸ್ಯರುಗಳು | 03 | 02 | 05 |

ಮೊದಲಿಗೆ ನಗರಸಭೆಯ ಆಯುಕ್ತರಾದ ಶ್ರೀ ಎಸ್.ಪ್ರಭುದೇವ್, ಕೆ.ಎಂ.ಎ.ಎಸ್. ರವರು ಮಾತನಾಡಿ ನಗರಸಭೆಯ ಮಾನ್ಯ ಅಧ್ಯಕ್ಷರಾದ ಶ್ರೀ ಎನ್.ಮಲ್ಲಿಕಾರ್ಜುನರವರಿಗೆ, ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಿ.ಎಸ್.ಸೋಮರುದ್ರಶರ್ಮರವರಿಗೆ, ಮಾನ್ಯ ಸದಸ್ಯರವರಿಗೂ ಮತ್ತು ನಾಮ ನಿರ್ದೇಶಿತ ಸದಸ್ಯರವರಿಗೂ ಸಭೆಯಲ್ಲಿ ಸ್ವಾಗತವನ್ನು ಕೋರಿ, ನಂತರ ಮಾನ್ಯ ಅಧ್ಯಕ್ಷರಲ್ಲಿ ಸಭೆಯನ್ನು ಪ್ರಾರಂಭಿಸಲು ಅನುಮತಿಯನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

<u>ವಿಷಯ ಸಂಖ್ಯೆ: 1</u>

ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲಿಸುವ ವಿಚಾರ.

<u>ತೀರ್ಮಾನ ಸಂಖ್ಯೆ:1</u>

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ದಿನಾಂಕ:26-02-2010 ರಂದು ನಡೆದ ಸಾಮಾನ್ಯ ಸಭೆಯ ವಿಷಯ ಸಂಖ್ಯೆ.1ರಲ್ಲಿ ತೀರ್ಮಾನವಾಗಿರುವ ಕೆಲವು ವಿಷಯಗಳನ್ನು ತಿದ್ದುಪಡಿ ಮಾಡಲು ತಿಳಿಸಿರುವಂತೆ ಸ್ವಾತಂತ್ರ್ಯ ಹೋರಾಟಗಾರರಾದ ದಿವಂಗತ ಮುಗುವಾಳಪ್ಪರವರ ಪ್ರತಿಮೆಯನ್ನು ಅನಾವರಣಗೊಳಿಸಲು ಸಿದ್ದಲಿಂಗಯ್ಯ ಸರ್ಕಲ್‌ನಲ್ಲಿ ಪರಿಶೀಲನೆ ಮಾಡಿ ಸೂಕ್ತ ಸ್ಥಳದಲ್ಲಿ ಸ್ಥಳಾವಕಾಶ ಕಲ್ಪಿಸಿಕೊಡಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

ಹಾಗೂ ಬೀದಿ ಕಸ ಗುಡಿಸುವ ಟೆಂಡರ್ ಪ್ರಕ್ರಿಯೆಯು ತಡವಾಗಿರುವುದರಿಂದ ಏಪ್ರಿಲ್-2010ರ ಮಾಹೆವರೆಗೆ ಹಾಲಿ ಇರುವ ಗುತ್ತಿಗೆದಾರರನ್ನೇ ಮುಂದುವರೆಸಲು ತೀರ್ಮಾನಿಸಲಾಯಿತು.

ದಿನಾಂಕ:26-02-2010ರ ಸಾಮಾನ್ಯ ಸಭೆಯ ತೀರ್ಮಾನ ಸಂಖ್ಯೆ.9ರಲ್ಲಿ ಶ್ರೀ ಮುಗುವಾಳಪ್ಪ ನವರಿಗೆ ಬದಲಿನಿವೇಶನ ನೀಡಲು ದಿನಾಂಕ:28-11-2006ರ ಸಾಮಾನ್ಯ ಸಭೆಯ ತೀರ್ಮಾನದಂತೆ ಕ್ರಮ ಕೈಗೊಳ್ಳಲು ತೀರ್ಮಾನಿಸಿರುವಂತೆ 40X60 ಅಡಿಗಳ ನಿವೇಶನವನ್ನು ಸ್ಕೌಟ್ ಕ್ಯಾಂಪ್ ರಸ್ತೆಯಲ್ಲಿ ಸ್ಥಳ ಪರಿಶೀಲನೆ ಮಾಡಿ ನೀಡಲು ತೀರ್ಮಾನಿಸಲಾಯಿತು.

ಹಾಗೂ ಹದಿನಾರು ಕಣ್ಣಿನ ಬಾವಿಯ ದಾವೆಯ ಬಗ್ಗೆ ನ್ಯಾಯಾಲಯದ ಆದೇಶವನ್ನು ಸುದೀರ್ಘವಾಗಿ ಚರ್ಚಿಸಲಾಗಿ, ನ್ಯಾಯಾಲಯದ ಆದೇಶದಲ್ಲಿ ಹಕ್ಕುದಾರಿಕೆ ಬಗ್ಗೆ ಸ್ಪಷ್ಟ ಆದೇಶಗಳಿಲ್ಲದಿರುವುದರಿಂದಲು ದಾವಾದ ಉಭಯ ಕಕ್ಷಿದಾರರು ಈ ದಾವಾದ ಕಾನೂನಿನ ಅಧಿಕಾರವಿದ್ದೂ ಒಬ್ಬರಿಗೆ ನಗರದ ಕುಂದುಕೊರತೆ ಮತ್ತು ಮತ್ತೊಬ್ಬರಿಗೆ ವಿವಿಧ ಕಾರ್ಯ ಕ್ಷೇತ್ರದಲ್ಲಿ ತೊಡಗಿರುತ್ತಾರೆಂದು ತಿಳಿಸಿರುವುದರಿಂದ ಹದಿನಾರು ಕಣ್ಣಿನ ಬಾವಿಯ ಜಾಗವನ್ನು ಸ್ವಚ್ಛತೆಪಡಿಸಿ, ಧಾರ್ಮಿಕ ಕಾರ್ಯಾಚರಣೆಗಳಿಗೆ ಬಳಸಿಕೊಳ್ಳಲು ಅವಕಾಶ ಕಲ್ಪಿಸಿಕೊಡಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ: 2

ಫೆಬ್ರವರಿ-2010ರ ಮಾಹೆಗಳ ಜನನ-ಮರಣಗಳ ವಿವರಗಳನ್ನು ಓದಿ ದಾಖಲಿಸುವ ವಿಚಾರ.

| ಕ್ರ. ಸಂ | ಮಾಹೆವಾರು | ಜನನ | | | ಮರಣ | | |
|---|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| 1 | ಫೆಬ್ರವರಿ-2010 | 80 | 138 | 218 | 38 | 19 | 57 |
| | ಒಟ್ಟು | 80 | 138 | 218 | 38 | 19 | 57 |

ತೀರ್ಮಾನ ಸಂಖ್ಯೆ:2

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಮೇಲ್ಕಂಡಂತೆ ಫೆಬ್ರವರಿ-2010ರ ಮಾಹೆಯ ಜನನ-ಮರಣಗಳ ವಿವರಗಳನ್ನು ಓದಿ ದಾಖಲಿಸಲಾಯಿತು.

ವಿಷಯ ಸಂಖ್ಯೆ: 3

ಫೆಬ್ರವರಿ-2010ರ ಮಾಹೆಯ ಜಮಾ ಖರ್ಚುಗಳನ್ನು ಓದಿ ರೆಕಾರ್ಡ್ ಮಾಡುವ ವಿಚಾರ.

ತೀರ್ಮಾನ ಸಂಖ್ಯೆ: 3

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಫೆಬ್ರವರಿ-2010ರ ಮಾಹೆಯ ಜಮಾ ಖರ್ಚುಗಳನ್ನು ಓದಿ ರೆಕಾರ್ಡ್ ಮಾಡಲಾಯಿತು.

ವಿಷಯ ಸಂಖ್ಯೆ: 4

2010-11ನೇ ಸಾಲಿನ ಪೂರ್ವಭಾವಿ ಕರಡು ಆಯ-ವ್ಯಯವನ್ನು ಪರಿಶೀಲಿಸುವ ವಿಚಾರ.

ತೀರ್ಮಾನ ಸಂಖ್ಯೆ: 4

ಸದರಿ ವಿಷಯವನ್ನು ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಗಿ, ಮಾನ್ಯ ಸದಸ್ಯರುಗಳವರ ಸಲಹೆ ಸೂಚನೆಗಳನ್ನು 2010-11ನೇ ಸಾಲಿನ ಆಯ-ವ್ಯಯದಲ್ಲಿ ಈ ಕೆಳಕಂಡಂತೆ ಅಳವಡಿಸಿಕೊಳ್ಳಲು ವ್ಯಕ್ತಪಡಿಸಿದರು.

ಸ್ಮಶಾನ ಅಭಿವೃದ್ಧಿಗೆ 22.00 ಲಕ್ಷಗಳನ್ನು ನಿಗಧಿಪಡಿಸುವಂತೆ ನಗರದ ಹೊರವಲಯಗಳ ಬೀದಿದೀಪಗಳನ್ನು ಅಳವಡಿಸಲು, ನಗರ ಸ್ವಚ್ಛತೆಗೆ ಹೆಚ್ಚು ಹಣವನ್ನು ನಿಗಧಿಪಡಿಸುವಂತೆ ತಿಳಿಸಲಾಯಿತು. ಹಾಗೂ ನಗರಸಭಾ ಸ್ವತ್ತುಗಳಿಗೆ ಕಾಂಪೌಂಡ್ ಹಾಕಿಸಲು ರೂ.15.00 ಲಕ್ಷಗಳನ್ನು ನಿಗಧಿಪಡಿಸುವಂತೆ ಮತ್ತು ಜಾಹಿರಾತು ಶುಲ್ಕ, ಅಭಿವೃದ್ಧಿ ಶುಲ್ಕ, ಉದ್ದಿಮೆ ಪರವಾನಿಗೆ ಶುಲ್ಕ, ನೆಲವಳಿ ಶುಲ್ಕ, ಸುಲಭ ಶೌಚಾಲಯಗಳ ಶುಲ್ಕಗಳ ಬೇಡಿಕೆಯನ್ನು ಹೆಚ್ಚಿಸಿಕೊಳ್ಳುವಂತೆ ಹಾಗೂ ನೀರು ಸರಬರಾಜು ಶಾಖೆಯ ಅನುಪಯುಕ್ತಸಾಮಗ್ರಿಗಳು, ತೆಂಗಿನ ಮರಗಳ ಫಸಲಿನಿಂದ ಬರುವ ಆದಾಯವನ್ನು ಜಮೆಯಲ್ಲಿ ನಮೂದಿಸಲು ಸಹ ತಿಳಿಸಲಾಯಿತು.

ನಗರದಲ್ಲಿ ಮನೆಗಳ ನಂಬರು ಮತ್ತು ಕ್ರಾಸ್ ಬೋರ್ಡ್‌ಗಳಲ್ಲಿ ಹೆಸರುಗಳನ್ನು ಬರೆಸುವ ಕಾರ್ಯಕ್ಕೆ ಮತ್ತು ಪುರಭವನವನ್ನು ಮೇಲ್ದರ್ಜೆಗೇರಿಸಲು, ವಿದ್ಯುತ್ ಕಂಬಗಳ ಬದಲಾವಣೆಗೆ, ಸ್ವಾಗತ ಕಮಾನುಗಳಿಗೆ, ಉದ್ಯಾನವನ ಲ್ಯಾಂಡ್ ಸ್ಕೇಪಿಂಗ್‌ಗೆ, ಸೋಲಾರ್ ದೀಪಗಳನ್ನು ಅಳವಡಿಸಲು, ಅಂಗಡಿ ಮಳಿಗೆಗಳಿಗೆ ವಿದ್ಯುತ್ ಕಲ್ಪಿಸುವುದಕ್ಕೆ, ನಗರದಲ್ಲಿ ರೋಗರುಜಿನಗಳು ಹರಡದಂತೆ ತಡೆಗಟ್ಟಲು ಔಷಧಿಗಳ ಖರೀದಿಗೆ ಹೆಚ್ಚು ಹಣವನ್ನು ನಿಗಧಿಪಡಿಸುವಂತೆ ತೀರ್ಮಾನಿಸಲಾಯಿತು.

ನಗರಸಭಾ ಆದಾಯವನ್ನು ಹೆಚ್ಚಿಸುವ ಸಲುವಾಗಿ ಖಾತಾ ಬದಲಾವಣೆಯ ಶುಲ್ಕವನ್ನು 30X40 ಅಡಿಗಳ ಒಳಗೆ ಇರುವ ಸ್ವತ್ತುಗಳಿಗೆ ರೂ.250/-ಗಳು ಹಾಗೂ 40 X60 ಅಡಿಗಳಿಗೂ ಹೆಚ್ಚು ಇರುವ ಸ್ವತ್ತುಗಳಿಗೆ ರೂ.500/-ಗಳ ಶುಲ್ಕವನ್ನು ಹಾಗೂ ವಿದ್ಯುತ್ ಎನ್.ಓ.ಸಿ. ಗೆ ರೂ.250/-ಗಳ ಶುಲ್ಕವನ್ನು ಹಾಗೂ 1 ಹೆಚ್.ಪಿ. ವಿದ್ಯುತ್ ಎನ್.ಓ.ಸಿ. ಗೆ ರೂ.100/-ಗಳ ಶುಲ್ಕವನ್ನು ನಿಗಧಿಪಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.





ವಿಷಯ ಸಂಖ್ಯೆ: 5

ನಗರಸಭೆಯ ನೈರ್ಮಲ್ಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಪ್ರೇಯರ್‌ಗಳು ಹಾಳಾಗಿದ್ದು, 6 ಬ್ಯಾಟರಿ ಚಾಲಿತ ಸ್ಪ್ರೇಯರ್ಸ್‌ಗಳನ್ನು ಹೊಸದಾಗಿ ಖರೀದಿಸುವ ವಿಚಾರ.

<u>ತೀರ್ಮಾನ ಸಂಖ್ಯೆ: 5</u>

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಬೇಸಿಗೆ ಕಾಲವಾದ್ದರಿಂದ ನಗರದಲ್ಲಿ ಹರಡುವ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುಲು ಮುಂಜಾಗ್ರತಾ ಕ್ರಮವಾಗಿ 6 ಬ್ಯಾಟರಿ ಚಾಲಿತ ಸ್ಪ್ರೇಯರ್ಸ್‌ಗಳನ್ನು ಹೊಸದಾಗಿ ಖರೀದಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ: 6</u>

2009-10ನೇ ಸಾಲಿನ ಟಿಪ್ಪರ್ ಟ್ರಕ್‌ಗೆ ಮೀಸಲಿರಿಸಿದ 15.00 ಲಕ್ಷ ರೂ.ಗಳಲ್ಲಿ ಅಶೋಕ ಲೇಲ್ಯಾಂಡ್ ಬೆಂಗಳೂರು ರವರು ನಮೂದಿಸಿದ ದರ ರೂ.9,48,000/-ಗಳಾಗುತ್ತಿದ್ದು, ಉಳಿದ 5.00 ಲಕ್ಷಗಳಿಗೆ ಈಗಾಗಲೇ ಅನುಮೋದನೆಯಾಗಿರುವ 10 ಲೀ. ಬಿನ್ಸ್‌ಗಳಿಗೆ ಬದಲಾವಣೆ ಮಾಡಲು ಅನುಮೋದನೆ ಪಡೆಯುವ ವಿಚಾರ.

<u>ತೀರ್ಮಾನ ಸಂಖ್ಯೆ: 6</u>

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, 2009-10ನೇ ಸಾಲಿನ ಟಿಪ್ಪರ್ ಟ್ರಕ್‌ಗೆ ಮೀಸಲಿರಿಸಿದ 15.00 ಲಕ್ಷ ರೂ.ಗಳಲ್ಲಿ ಅಶೋಕ ಲೇಲ್ಯಾಂಡ್ ಬೆಂಗಳೂರು ರವರು ನಮೂದಿಸಿದ ದರ ರೂ.9,48,000/-ಗಳಾಗುತ್ತಿದ್ದು, ಉಳಿದ 5.00 ಲಕ್ಷಗಳಿಗೆ ಈಗಾಗಲೇ ಅನುಮೋದನೆಯಾಗಿರುವ 10ಲೀ. ಬಿನ್ಸ್‌ಗಳಿಗೆ ಬದಲಾವಣೆ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ: 7</u>

2010-11ನೇ ಸಾಲಿಗೆ ನೈರ್ಮಲ್ಯ ಸಾಮಗ್ರಿಗಳಿಗೆ ವಾರ್ಷಿಕ ಟೆಂಡರ್ ಕರೆಯಲು ಆಡಳಿತಾತ್ಮಕ ಅನುಮೋದನೆ ನೀಡುವ ವಿಚಾರ.

<u>ತೀರ್ಮಾನ ಸಂಖ್ಯೆ:7</u>

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, 2010-11ನೇ ಸಾಲಿಗೆ ನೈರ್ಮಲ್ಯ ಸಾಮಗ್ರಿಗಳಿಗೆ ವಾರ್ಷಿಕ ಟೆಂಡರ್ ಕರೆಯಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ: 8</u>

2010-11ನೇ ಸಾಲಿಗೆ ನೈರ್ಮಲ್ಯ ವಿಭಾಗದ 2 ಡಂಪರ್ ಪ್ಲೇಸರ್, 1 ಜೆ.ಸಿ.ಬಿ. ವಾಹನಕ್ಕೆ ಚಾಲಕರನ್ನು ಪಡೆಯಲು ಅಂದಾಜು ಮೊತ್ತ ರೂ.1,82,000/-(ಒಂದು ಲಕ್ಷ ಎಂಭತ್ತೆರಡು ಸಾವಿರ ರೂಪಾಯಿಗಳು) ಗಳಿಗೆ ವಾರ್ಷಿಕ ಟೆಂಡರ್ ಕರೆಯಲು ಆಡಳಿತಾತ್ಮಕ ಅನುಮೋದನೆ ನೀಡುವ ವಿಚಾರ.

<u>ತೀರ್ಮಾನ ಸಂಖ್ಯೆ: 8</u>

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, 2010-11ನೇ ಸಾಲಿಗೆ ನೈರ್ಮಲ್ಯ ವಿಭಾಗದ 2 ಡಂಪರ್ ಪ್ಲೇಸರ್, 1 ಜೆ.ಸಿ.ಬಿ. ವಾಹನಕ್ಕೆ ಚಾಲಕರನ್ನು ಪಡೆಯಲು ಅಂದಾಜು ಮೊತ್ತ ರೂ.1,82,000/-(ಒಂದು ಲಕ್ಷ ಎಂಭತ್ತೆರಡು ಸಾವಿರ ರೂಪಾಯಿಗಳು) ಗಳಿಗೆ ವಾರ್ಷಿಕ ಟೆಂಡರ್ ಕರೆಯಲು ಸಭೆಯಲ್ಲಿ ತೀರ್ಮಾನಿಸಲಾಯಿತು.





<u>ವಿಷಯ ಸಂಖ್ಯೆ: 9</u>

ದಿನಾಂಕ:02-02-2010 ರಂದು ನಡೆದ ಸಾಮಾನ್ಯ ಸಭೆಯಲ್ಲಿ ಮುಂದೂಡಲಾದ ವಿಷಯ ಸಂಖ್ಯೆ.8ರ ನಗರಸಭೆ ಬಸ್ ನಿಲ್ದಾನದ ಆವರಣದಲ್ಲಿ ವಿವಿಧ ಯೋಜನೆಯಲ್ಲಿ ನಿರ್ಮಿಸಿರುವ ಅಂಗಡಿ ಮಳಿಗೆಗಳಲ್ಲಿ ಖಾಲಿ ಇರುವ ಮಳಿಗೆಗಳನ್ನು ಹರಾಜು ಮಾಡುವ ವಿಚಾರ.

ತೀರ್ಮಾನ ಸಂಖ್ಯೆ:9

ಸದರಿ ವಿಷಯವನ್ನು ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಗಿ, ನಗರಸಭೆಯ 10ನೇ ಹಣಕಾಸು ಯೋಜನೆಯಡಿ ಮತ್ತು ಐ.ಡಿ.ಎಸ್.ಎಂಟಿ. ಯೋಜನೆಯಡಿ ನಿರ್ಮಿಸಿರುವ ಸುಮಾರು 37 ಅಂಗಡಿಗಳಿಗೆ ವಿದ್ಯುತ್ ಸಂಪರ್ಕವಿಲ್ಲದೆ ಖಾಲಿ ಇದ್ದು, ಬಾಡಿಗೆ ಇಲ್ಲದೆ ನಗರಸಭೆಗೆ ಸುಮಾರು 3ಕೋಟಿರೂಗಳಿಗೂ ಅಧಿಕವಾಗಿ ಆರ್ಥಿಕ ನಷ್ಠ ಉಂಟಾಗಿರುವುದರಿಂದ 10ನೇ ಹಣಕಾಸು ಯೋಜನೆ ಮತ್ತು ಐ.ಡಿ.ಎಸ್.ಎಂಟಿ ಅಂಗಡಿಗಳಿಗೆ ನಿರ್ವಹಿಸಿರುವ ವಿದ್ಯತ್ ಕಾಮಗಾರಿಗೆ ದಿನಾಂಕ:21-07-2005ರಂದು ನಡೆದ ಸಾಮನ್ಯ ಸಭೆಯಲ್ಲಿ ಈ ಕಾಮಗಾರಿಗಳಲ್ಲಿ ಯಾವ ಕಾಮಗಾರಿಗೆ ಎಎಷ್ಟು ಕೆಲಸ ಆಗಿದೆ ಎಂಬುದರ ಬಗ್ಗೆ ವಾರ್ಡ್ ಸದಸ್ಯರ ಸಮಕ್ಷಮದಲ್ಲಿ ಕಾಮಗಾರಿ ಪರಿಶೀಲಿಸಿ ಅಳತೆಗಳನ್ನು ಎಂ.ಬಿ.ಪುಸ್ತಕದಲ್ಲಿ ದಾಖಲಿಸಿ ಚೆಕ್ ಮೆಸರ್‌ಮೆಂಟ್ ಮಾಡಿಸಿ ಕೆಲಸ ನಿರ್ವಹಿಸಿದ ದಿನಾಂಕಕ್ಕೆ ಎಸ್.ಆರ್.ದರದಂತೆ ಬಿಲ್ ತಯಾರಿಸಿ ಅಂತಹ ಬಿಲ್‌ಗಳಲ್ಲಿ ಶೇಕಡ 25ರಷ್ಟು ದಂಡವಾಗಿ ನಗರಸಭೆಗೆ ಮುಟ್ಟುಗೋಲು ಹಾಕಿ ಹಣವನ್ನು ಪಾವತಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಮಂಜೂರಾತಿ ಪಡೆಯಬಹುದೆಂದು ತೀರ್ಮಾನಿಸಿರುವಂತೆ ಅಳತೆ ಪುಸ್ತಕದಲ್ಲಿ ದಿನಾಂಕ22-02-2006ರಂದು ಅಂಗಡಿ ಮಳಿಗೆಗಳ ವಿದ್ಯುದ್ದೀಕರಣ ಕಾಮಗಾರಿಗಳ ಅಳತೆಗಳನ್ನು ದಾಖಲಿಸಿದ್ದು ಚೆಕ್ ಮೆಸರ್ ಮೆಂಟ್ ಆಗಿರುತ್ತದೆ. ಆದರೆ ಈವರೆವಿಗೂ ಸುಮಾರು ನಾಲ್ಕು ವರ್ಷಗಳಿಂದ ಸರ್ಕಾರದಿಂದ ಮಂಜೂರಾತಿ ದೊರೆತಿಲ್ಲವೆಂದು ಸಭೆಯಲ್ಲಿ ಪರಿಶೀಲಿಸಲಾಗಿ ನಗರಸಭೆಗೆ ಸುಮಾರು 3ಕೋಟಿ ನಷ್ಟವಾಗಿರುವುದರಿಂದ ನಗರಸಭೆಯ ಕೌನ್ಸಿಲ್‌ಗೆ ರೂ/-30.00 ಲಕ್ಷದವರೆವಿಗೂ ಮಂಜೂರಾತಿ ನೀಎಉವ ಅಧಿಕಾರವಿದ್ದೂ ನಗರಸಭೆಯ ಆದಾಯದ ಆರ್ಥಿಕ ದೃಷ್ಠಿಯಿಂದ ಯಾವುದೇ ಆಕ್ಷೇಪಣೆ ಮತ್ತು ಬಿಲ್ ಪಾವತಿಸುವ ಬಗ್ಗೆ ನಗರಸಭೆಯ ಪೂರ್ಣ ಕೌನ್ಸಿಲ್ ಜವಾಬ್ದಾರಿ ತೆಗೆದುಕೊಳ್ಳುತ್ತದೆಂದು ಹಾಗೂ ಈಗ ನಿರ್ವಹಿಸಿರುವ ಕಾಮಗಾರಿಗಳಿಗೆ ಪಡೆದಿರುವ ದಾಖಲಾತಿಗಳಿಗನುಗುಣವಾಗಿ ಮತ್ತೆ ಯಾವುದೇ ದಾಖಲಾತಿಗಳನ್ನು ಪಡೆಯದೇ ನೇರವಾಗಿ ಇವರಿಗೆ ಹಣ ಪಾವತಿಸಬೇಕೆಂದೂ ಈ ವಿಷಯಗಳಲ್ಲಿ ಪೌರಾಯುಕ್ತರು ಮತ್ಯಾವುದೇ ಸಮುಜಾಯಿಷಿ ಹೇಳದಂತೆ ಹಾಗೂ ಈ ಪಾವತಿಯ ಪೂರ್ಣ ಜವಾಬ್ದಾರಿಯನ್ನು ನಗರಸಭೆ ಕೌನ್ಸಿಲ್ ವಹಿಸಿಕೊಂಡಿಯೆಂದು ಪೌರಾಯುಕ್ತರಿಗೆ ಸೂಚಿಸಿ ತೀರ್ಮಾನಿಸಿ ಈಗಾಗಲೇ ಅಳತೆ ಪುಸ್ತಕದಲ್ಲಿ ನಮೂದಾಗಿರುವಂತೆ ವಿದ್ಯುದ್ದೀಕರಣ ಕೆಲಸ ನಿರ್ವಹಿಸಿರುವ ಗುತ್ತಿಗೆದಾರರಿಗೆ ಅಳತೆ ಪುಸ್ತಕ ಮತ್ತು ಅಂದಿನ ಆಡಳತಾಧಿಕಾರಿಗಳಾದ ಮಾನ್ಯ ಜಿಲ್ಲಾಧಿಕಾರಿಗಳವರ ಅಧ್ಯಕ್ಷತೆಯಲ್ಲಿ ದಿನಾಂಕ:21-07-2005ರ ತೀರ್ಮಾನದಂತೆ ಗುತ್ತಗೆದಾರರಾದ ಶ್ರೀ ಪ್ರೀತಮ್ ಎಲೆಕ್ಟ್ರಿಕಲ್ ದೊಡ್ಡಬಳ್ಳಾಪುರ ರವರಿಗೆ 1.83107/-ರೂಗಳ ಬಿಲ್ ಪಾವತಿಸಿ ಸದರಿ ಗುತ್ತಿಗೆದಾರರಿಂದ ನಿರಾಕ್ಷೇಪಣಾ ಪತ್ರ ಪಡೆದು ಮತ್ತು ಉಳಿದಿರುವ ಕಾಮಗಾರಿಗೆ ಈಗ ತಯಾರಿಸಿರುವ ಅಂದಾಜಿಗೆ ಟೆಂಡರ್ ಪ್ರಕಟಣೆ ಹೊರಡಿಸಿ ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ಹರಾಜು ಪ್ರಕ್ರಿಯೆ ನಡೆಸಲು ಸಭೆಯಲ್ಲಿ ಒಪ್ಪಗೆ ನೀಡಿ ತೀರ್ಮಾನಿಸಸಲಾಯಿತು

## ಅಧ್ಯಕ್ಷರ ಅನುಮತಿಯಿಂದ ಸಭೆಯ ಮುಂದೆ ತರಬಹುದಾದ ಇತರೆ ವಿಚಾರಗಳಲ್ಲಿ:

ವಿಷಯ ಸಂಖ್ಯೆ.10/1

ದಿನಾಂಕ:14-04-2010 ರಂದು ಡಾ.ಅಂಬೇಡ್ಕರ್‌ರವರ ಜಯಂತಿ ಪ್ರಯುಕ್ತ ದೊಡ್ಡಬಳ್ಳಾಪುರ ನಗರದ ಹಳೇ ಬಸ್ ನಿಲ್ದಾಣದ ಹತ್ತಿರ ಪುರಭವನದ ಸರ್ಕಲ್‌ನಲ್ಲಿರುವ ಡಾ: ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಸಮಾರಂಭಗಳಲ್ಲಿ ಪೂಜೆ ಸಲ್ಲಿಸಲು ಮೆಟ್ಟಿಲು ಮತ್ತು ಪ್ಲಾಟ್ ಫಾರಂ ಇಲ್ಲದೇ ಇರುವುದರಿಂದ ಮೆಟ್ಟಿಲು ಮತ್ತು ಪ್ಲಾಟ್ ಫಾರಂ ಅನ್ನು ತುರ್ತಾಗಿ ಹಾಕಿಸುವುದು ಹಾಗೂ ಇವುಗಳಿಗೆ ಬಣ್ಣ ಮಾಡಿಸುವ ವಿಚಾರ.

ಅಂದಾಜು ವೆಚ್ಚ ರೂ.95,000/-

<u>ತೀರ್ಮಾನ ಸಂಖ್ಯೆ:10/1</u>

ಈ ವಿಷಯದಲ್ಲಿ ಚರ್ಚಿಸಲಾಗಿ, ದೊಡ್ಡಬಳ್ಳಾಪುರ ನಗರದ ಹಳೇ ಬಸ್ ನಿಲ್ದಾಣದ ಹತ್ತಿರ ಪುರಭವನದಲ್ಲಿರುವ ಡಾ: ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಪೂಜೆ ಸಲ್ಲಿಸಲು ಮೆಟ್ಟಿಲು ಮತ್ತು ಪ್ಲಾಟ್ ಫಾರಂ ಇಲ್ಲದೇ ಇರುವುದರಿಂದ ದಿನಾಂಕ:14-04-2010 ರಂದು ಡಾ.ಅಂಬೇಡ್ಕರ್‌ರವರ ಜಯಂತಿ ಪ್ರಯುಕ್ತ ದಿನಾಂಕ:14-04-2010ರೊಳಗೆ ತುರ್ತಾಗಿ ಮಾಡಿಸಬೇಕೆಂದು ದಿನಾಂಕ: ರಂದು ನಡೆದ ಡಾ: ಬಿ.ಆರರ್.ಅಂಬೇಡ್ಕರ್ ದಿನಾಚರಣೆ ಸಮಿತಿಯ ಸಭೆಯಲ್ಲಿ ದಲಿತ ಸಂಘಗಳು ತೀರ್ವವಾಗಿ ಸೂಚನೆಗಳನ್ನು ನೀಡಿದ್ದು ಹಾಗೂ ಈ ಕಾರ್ಯ ಬಹಳ ದಿವಸಗಳಿಂದ ನಡೆಯದೇ ಹಲವಾರು ಬಾರಿ ಟೀಕೆ ಟಿಪ್ಪಣಿಗಳನ್ನು ಮಾಡಿಕೊಂಡು ಬಂದಿರುವುದರಿಂದ ಕೂಡಲೆ ಇವುಗಳನ್ನು ಮಾಡಿಸಲು ಹಾಗೂ ಅಗತ್ಯವಿರುವ ಬಣ್ಣ ಬಳಿಯುವ ಕಾರ್ಯಗಳನ್ನು ಮಾಡಿಸಲು ಸರ್ಕಾರದ ಆದೇಶದ ಸಂಖ್ಯೆ.ನಅಇ/43/ಟಿಎಂಎಸ್/2004 ಬೆಂಗಳೂರು 07-07-2004 ಮತ್ತು ದಿನಾಂಕ:18-10-2004ರನ್ವಯ ಎಸ್.ಆರ್. ದರದಂತೆ ತುಂಡುಗುತ್ತಿಗೆ ಆಧಾರದಮೇಲೆ ಕಾಮಗಾರಿ ನಿರ್ವಹಿಸಿ, ಇದಕ್ಕೆ ತಗಲುವ ವೆಚ್ಚವನ್ನು ನಗರಸಭೆಯಿಂದ ಭರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಹಾಗೂ ಈ ಅಂದಾಜು ಮೊತ್ತವನ್ನು ಸಹ ಅನುಮೋದಿಸಲಾಯಿತು.

<u>ವಿಷಯ ಸಂಖ್ಯೆ.10/2</u>

ದಿನಾಂಕ:14-04-2010ರಂದು ಡಾ.ಅಂಬೇಡ್ಕರ್‌ರವರ ಜಯಂತಿ ಪ್ರಯುಕ್ತ ದೊಡ್ಡಬಳ್ಳಾಪುರ ನಗರದ ಪುರಭವನದ ಸರ್ಕಲ್‌ನಲ್ಲಿರುವ ಡಾ: ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಅಳವಡಿಸಿರುವ ಗ್ರಿಲ್ಸ್‌ಗೆ ಬಣ್ಣ ಬಳಸುವುದು ಮತ್ತು ಸ್ಟೀಲ್ ರೈಲಿಂಗ್ ಅಳವಡಿಸುವ ವಿಚಾರ.
ಅಂದಾಜು ವೆಚ್ಚ ರೂ.45,000/-

<u>ತೀರ್ಮಾನ ಸಂಖ್ಯೆ:10/2</u>

ಈ ವಿಷಯದಲ್ಲಿ ಚರ್ಚಿಸಲಾಗಿ, ದಿನಾಂಕ:14-04-2010ರಂದು ಡಾ.ಅಂಬೇಡ್ಕರ್‌ರವರ ಜಯಂತಿ ಪ್ರಯುಕ್ತ ದೊಡ್ಡಬಳ್ಳಾಪುರ ನಗರದ ಪುರಭವನದ ಸರ್ಕಲ್‌ನಲ್ಲಿರುವ ಡಾ: ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಅಳವಡಿಸಿರುವ ಗ್ರಿಲ್ಸ್‌ಗೆ ಬಣ್ಣ ಬಳಸುವುದು ಮತ್ತು ಸ್ಟೀಲ್ ರೈಲಿಂಗ್ ಅಳವಡಿಸುವ ಕಾಮಗಾರಿಯನ್ನು ದಿನಾಂಕ:14-04-2010ರೊಳಗೆ ಸರ್ಕಾರದ ಆದೇಶದ ಸಂಖ್ಯೆ.ನಅಇ/43/ಟಿಎಂಎಸ್/2004 ಬೆಂಗಳೂರು 07-07-2004 ಮತ್ತು ದಿನಾಂಕ:18-10-2004ರನ್ವಯ ಎಸ್.ಆರ್. ದರದಂತೆ ತುಂಡುಗುತ್ತಿಗೆ ಆಧಾರದಮೇಲೆ ಕಾಮಗಾರಿ ನಿರ್ವಹಿಸಿ, ಇದಕ್ಕೆ ತಗಲುವ ವೆಚ್ಚವನ್ನು ನಗರಸಭೆಯಿಂದ ಭರಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ.10/3</u>

ಡಾ.ಬಿ.ಆರ್.ಅಂಬೇಡ್ಕರ್ ರಸ್ತೆಯಲ್ಲಿರುವ ಬೋರ್ಡ್‌ಗಳಿಗೆ ಬಣ್ಣ ಬಳಸುವ ವಿಚಾರ.

<u>ತೀರ್ಮಾನ ಸಂಖ್ಯೆ:10/3</u>

ಈ ವಿಷಯದಲ್ಲಿ ಚರ್ಚಿಸಲಾಗಿ, ಡಾ.ಬಿ.ಆರ್.ಅಂಬೇಡ್ಕರ್ ರಸ್ತೆಯಲ್ಲಿರುವ ಬೋರ್ಡ್‌ಗಳಿಗೆ ಬಣ್ಣ ಬಳಸಲು ಹಾಗೂ ಇದಕ್ಕೆ ತಗಲುವ ವೆಚ್ಚವನ್ನು ನಗರಸಭಾ ನಿಧಿಯಿಂದ ಭರಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ.10/4</u>

2008-09ನೇ ಸಾಲಿನ ಎಸ್.ಎಫ್.ಸಿ. ಅನುಧಾನದಡಿಯಲ್ಲಿ ವಾರ್ಡ್ ನಂ.28ರ ನಗರಸಭಾ ಕಛೇರಿ ಪಕ್ಕದಲ್ಲಿರುವ ಪಾರ್ಕ್‌ನ ಒಳಗಡೆ ಪುಟ್‌ಪಾತ್ ಮಾಡುವ ಕೆಲಸಕ್ಕೆ ಟೆಂಡರ್ ಕರೆದಿದ್ದು, ಕಡಿಮೆ ದರ ನಮೂದಿಸಿರುವ ಟೆಂಡರ್‌ದಾರರ ದರಗಳನ್ನು ಅನುಮೋದಿಸುವ ವಿಚಾರ.

1) ಶ್ರೀ ಕೆ.ಎಂ. ಅಶ್ವತ್ಥನಾರಾಯಣ - ಶೇ. 8.93 ಎಸ್.ಆರ್. ದರಕ್ಕಿಂತ ಹೆಚ್ಚಿಗೆ
2) ವಿನ್ಯಾಸ್ ಬಿಲ್ಡರ್ಸ್ - ಶೇ. 10.91 ಎಸ್.ಆರ್. ದರಕ್ಕಿಂತ ಹೆಚ್ಚಿಗೆ

ತೀರ್ಮಾನ ಸಂಖ್ಯೆ:10/4

ಈ ವಿಷಯದಲ್ಲಿ ಚರ್ಚಿಸಲಾಗಿ 2008-09ನೇ ಸಾಲಿನ ಎಸ್.ಎಫ್.ಸಿ. ಅನುಧಾನದಡಿಯಲ್ಲಿ ವಾರ್ಡ್ ನಂ.28ರ ನಗರಸಭಾ ಕಛೇರಿ ಪಕ್ಕದಲ್ಲಿರುವ ಪಾರ್ಕ್‌ನ ಒಳಗಡೆ ಪುಟ್‌ಪಾತ್ ಮಾಡುವ ಕೆಲಸಕ್ಕೆ ಒಟ್ಟು ಇಬ್ಬರು ಟೆಂಡರ್‌ದಾರರು ಭಾಗವಹಿಸಿದ್ದು, ಈ ಪೈಕಿ ಶ್ರೀ ಕೆ.ಎಂ.ಅಶ್ವತ್ಥನಾರಾಯಣರವರು ಎಸ್.ಆರ್. ದರಕ್ಕಿಂತ ಶೇ.8.93 ಹೆಚ್ಚಿಗೆ ನಿರ್ವಹಿಸಲು ನಮೂದಿಸಿರುವ ದರವು ಕಡಿಮೆಯಾಗಿರುವುದರಿಂದ ಈ ದರವನ್ನು ಅನುಮೋದಿಸಲಾಯಿತು.

ವಿಷಯ ಸಂಖ್ಯೆ.10/5

2008-09ನೇ ಸಾಲಿನ ಎಸ್.ಎಫ್.ಸಿ. ಅನುಧಾನದಡಿಯಲ್ಲಿ ವಾರ್ಡ್ ನಂ.28ರ ನಗರಸಭಾ ಕಛೇರಿ ಪಕ್ಕದಲ್ಲಿರುವ ಪಾರ್ಕ್‌ನ ಒಳಗಡೆ ಪ್ಲಾಂಟೇಶನ್ ಮಾಡುವ ಕಾಮಗಾರಿ ವಿಚಾರ.

1) ಶ್ರೀ ಕೆ.ಎಂ. ಅಶ್ವತ್ಥನಾರಾಯಣ – ಶೇ. 14.25 ಎಸ್.ಆರ್. ದರಕ್ಕಿಂತ ಹೆಚ್ಚಿಗೆ
2) ವಿನ್ಯಾಸ್ ಬಿಲ್ಡರ್ಸ್ – ಶೇ. 8.58 ಎಸ್.ಆರ್. ದರಕ್ಕಿಂತ ಹೆಚ್ಚಿಗೆ

ತೀರ್ಮಾನ ಸಂಖ್ಯೆ:10/5

ಈ ವಿಷಯದಲ್ಲಿ ಚರ್ಚಿಸಲಾಗಿ 2008-09ನೇ ಸಾಲಿನ ಎಸ್.ಎಫ್.ಸಿ. ಅನುಧಾನದಡಿಯಲ್ಲಿ ವಾರ್ಡ್ ನಂ.28ರ ನಗರಸಭಾ ಕಛೇರಿ ಪಕ್ಕದಲ್ಲಿರುವ ಪಾರ್ಕ್‌ನ ಒಳಗಡೆ ಪ್ಲಾಂಟೇಶನ್ ಮಾಡುವ ಕೆಲಸಕ್ಕೆ ಒಟ್ಟು ಇಬ್ಬರು ಟೆಂಡರ್‌ದಾರರು ಭಾಗವಹಿಸಿದ್ದು, ಈ ಪೈಕಿ ವಿನ್ಯಾಸ್ ಬಿಲ್ಡರ್ಸ್ ರವರು ಎಸ್.ಆರ್. ದರಕ್ಕಿಂತ ಶೇ.8.58 ಹೆಚ್ಚಿಗೆ ನಿರ್ವಹಿಸಲು ನಮೂದಿಸಿರುವ ದರವು ಕಡಿಮೆಯಾಗಿರುವುದರಿಂದ ಈ ದರವನ್ನು ಅನುಮೋದಿಸಲಾಯಿತು.

ವಿಷಯ ಸಂಖ್ಯೆ.10/6

2008-09ನೇ ಸಾಲಿನ ಎಸ್.ಎಫ್.ಸಿ. ಅನುಧಾನದ ಶೇ. 18ರ ನಿಧಿಯಡಿಯಲ್ಲಿ ವಾರ್ಡ್ ನಂ.4ರ ಡಿ. ಕ್ರಾಸ್ ರಸ್ತೆಯಿಂದ ಬೋವಿ ಕಾಲೋನಿವರೆಗಿನ (ಸಾಮಿಲ್ ರಸ್ತೆ) ರಸ್ತೆಗೆ ಜಲ್ಲಿ ಹಾಕುವುದು ಹಾಗೂ ಚರಂಡಿ ಮಾಡುವ ಕಾಮಗಾರಿ ವಿಚಾರ.

1) ಶ್ರೀ ಆರ್.ಎಸ್.ರೇಣುಕಾ ಪ್ರಸಾದ್ – ಶೇ. 10.37 ಎಸ್.ಆರ್. ದರಕ್ಕಿಂತ ಹೆಚ್ಚಿಗೆ
2) ಶ್ರೀ ಸರ್ದಾರ್ ಪಾಷ – ಶೇ. 6.97 ಎಸ್.ಆರ್. ದರಕ್ಕಿಂತ ಹೆಚ್ಚಿಗೆ

ತೀರ್ಮಾನ ಸಂಖ್ಯೆ:10/6

ಈ ವಿಷಯದಲ್ಲಿ ಚರ್ಚಿಸಲಾಗಿ 2008-09ನೇ ಸಾಲಿನ ಎಸ್.ಎಫ್.ಸಿ. ಅನುಧಾನದ ಶೇ.18ರ ನಿಧಿಯಡಿಯಲ್ಲಿ ವಾರ್ಡ್ ನಂ.4ರ ಡಿ. ಕ್ರಾಸ್ ರಸ್ತೆಯಿಂದ ಬೋವಿ ಕಾಲೋನಿವರೆಗಿನ (ಸಾಮಿಲ್ ರಸ್ತೆ) ರಸ್ತೆಗೆ ಜಲ್ಲಿ ಹಾಕುವುದು ಹಾಗೂ ಚರಂಡಿ ಮಾಡುವ ಕೆಲಸಕ್ಕೆ ಒಟ್ಟು ಇಬ್ಬರು ಟೆಂಡರ್‌ದಾರರು ಭಾಗವಹಿಸಿದ್ದು, ಈ ಪೈಕಿ ಶ್ರೀ ಸರ್ದಾರ್‌ಪಾಷರವರು ಎಸ್.ಆರ್. ದರಕ್ಕಿಂತ ಶೇ.6.97 ಹೆಚ್ಚಿಗೆ ನಿರ್ವಹಿಸಲು ನಮೂದಿಸಿರುವ ದರವು ಕಡಿಮೆಯಾಗಿರುವುದರಿಂದ ಈ ದರವನ್ನು ಅನುಮೋದಿಸಲಾಯಿತು.

ವಿಷಯ ಸಂಖ್ಯೆ.10/7

12ನೇ ಹಣಕಾಸು ಯೋಜನೆಯ ಅನುಧಾನದಡಿಯಲ್ಲಿ ದೊಡ್ಡಬಳ್ಳಾಪುರ ನಗರಸಭೆಯ ಪುರಭವನ ಕಟ್ಟಡಕ್ಕೆ ಸುಣ್ಣಬಣ್ಣ ಬಳಿಯುವ ಕೆಲಸದ ವಿಚಾರ.

1) ಶ್ರೀ ಎ.ಆರ್.ಲಕ್ಷ್ಮೀನಾರಾಯಣ – ಶೇ. 6.97 ಎಸ್.ಆರ್. ದರಕ್ಕಿಂತ ಹೆಚ್ಚಿಗೆ
2) ಶ್ರೀ ಆರ್.ಎಸ್. ಮಂಜುನಾಥ್– ಶೇ. 11.68 ಎಸ್.ಆರ್. ದರಕ್ಕಿಂತ ಹೆಚ್ಚಿಗೆ

<u>ತೀರ್ಮಾನ ಸಂಖ್ಯೆ:10/7</u>

ಈ ವಿಷಯದಲ್ಲಿ ಚರ್ಚಿಸಲಾಗಿ 12ನೇ ಹಣಕಾಸು ಯೋಜನೆಯ ಅನುಧಾನದಡಿಯಲ್ಲಿ ದೊಡ್ಡಬಳ್ಳಾಪುರ ನಗರಸಭೆಯ ಪುರಭವನ ಕಟ್ಟಡಕ್ಕೆ ಸುಣ್ಣಬಣ್ಣ ಬಳಿಯುವ ಕೆಲಸಕ್ಕೆ ಒಟ್ಟು ಇಬ್ಬರು ಟೆಂಡರ್‌ದಾರರು ಭಾಗವಹಿಸಿದ್ದು, ಈ ಪೈಕಿ ಶ್ರೀ ಎ.ಆರ್. ಲಕ್ಷ್ಮೀನಾರಾಯಣ ರವರು ಎಸ್.ಆರ್. ದರಕ್ಕಿಂತ ಶೇ.6.97 ಹೆಚ್ಚಿಗೆ ನಿರ್ವಹಿಸಲು ನಮೂದಿಸಿರುವ ದರವು ಕಡಿಮೆಯಾಗಿರುವುದರಿಂದ ಈ ದರವನ್ನು ಅನುಮೋದಿಸಲಾಯಿತು.

<u>ವಿಷಯ ಸಂಖ್ಯೆ.10/8</u>

ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಪತ್ರದ ಸಂಖ್ಯೆ.ತಾಸಕಅ/ದೊ/ಸಿಆರ್/14/97-98 ದಿನಾಂಕ:10-12-2009ರ ಪತ್ರದಲ್ಲಿ ಕೋರಿರುವಂತೆ ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಶೇ.22.75ರ ನಿಧಿಯಡಿಯಲ್ಲಿ 10.00 ಲಕ್ಷ ರೂ.ಗಳನ್ನು ನೀಡುವಂತೆ ಕೋರಿರುವ ವಿಚಾರ.

<u>ತೀರ್ಮಾನ ಸಂಖ್ಯೆ:10/8</u>

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಈ ಹಿಂದೆಯೇ ದಿನಾಂಕ: 29-11-2008ರ ಚೆಕ್ ನಂ:211167ರಲ್ಲಿ 10.00 ಲಕ್ಷರೂಗಳ ಮೊತ್ತವನ್ನು ಡಾ: ಬಿ.ಆರ್.ಅಂಬೇಡ್ಕರ್ ಭವನಕ್ಕೆ ನೀಡಲಾಗಿದ್ದು ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಪತ್ರದ ಸಂಖ್ಯೆ.ತಾಸಕಅ/ದೊ/ಸಿಆರ್/14/97-98 ದಿನಾಂಕ:10-12-2009ರ ಪತ್ರದಲ್ಲಿ ಹಣಕಾಸು ಕೊರತೆಯಿಂದ ಕಾಮಗಾರಿಯು ಸ್ಥಗಿತಗೊಂಡಿರುವುದರಿಂದ ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಶೇ.22.75ರ ನಿಧಿಯಡಿಯಲ್ಲಿ 10.00 ಲಕ್ಷರೂ.ಗಳ ಅನುದಾನವನ್ನು ನೀಡುವಂತೆ ಕೋರಿದ್ದು ಹಾಗೂ ಈ ಬಗ್ಗೆ ತುರ್ತಾಗಿ ಕಾಮಗಾರಿಯನ್ನು ಪ್ರಾರಂಭಿಸುವಂತೆ ದಲಿತ ಸಂಘಟನೆಗಳು ಕೋರಿದ್ದು ಹಾಗೂ ಶೇ.22.75ರ ನಿಧಿಯಡಿಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸದೇ ಇರುವುದರಿಂದ ಈ ನಿಧಿಯಲ್ಲಿ ಉಳಿದಿರುವ ಅಖೈರು ಶುಲ್ಕಿನಲ್ಲಿ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಕೋರಿಕೆ ಮೇರೆಗೆ 10.00 ಲಕ್ಷಗಳನ್ನು ನೀಡಲು ಸಭೆಯಲ್ಲಿ ಒಪ್ಪಿ ಪೌರಾಯುಕ್ತರಿಗೆ ಹಣ ಪಾವತಿಸಲು ಸೂಚಿಸಿ ಸಭೆಯಲ್ಲಿ ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ.10/9</u>

ದೊಡ್ಡಬಳ್ಳಾಪುರ ತಾಲ್ಲೂಕು ವಿದ್ಯುತ್ ಗುತ್ತಿಗೆದಾರರ ಸಂಘಕ್ಕೆ ಮಾರ್ಕೆಟ್ ದರದಂತೆ ಹಣಪಾವತಿಸಿಕೊಂಡು ನಿವೇಶನ ನೀಡಲು ಸಾಮಾನ್ಯ ಸಭೆಯ ದಿನಾಂಕ:02-11-2009ರಲ್ಲಿ ತೀರ್ಮಾನಿಸಿರುವಂತೆ ಮಹಿಳಾ ವಿದ್ಯುತ್ ಕೈಮಗ್ಗ ಸಂಘದ ಪಕ್ಕ ಖಾಲಿ ಇರುವ 40X20 ಅಡಿಗಳ ನಿವೇಶನವನ್ನು ನೀಡುವ ವಿಚಾರ.

<u>ತೀರ್ಮಾನ ಸಂಖ್ಯೆ:10/9</u>

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ದೊಡ್ಡಬಳ್ಳಾಪುರ ತಾಲ್ಲೂಕು ವಿದ್ಯುತ್ ಗುತ್ತಿಗೆದಾರರ ಸಂಘಕ್ಕೆ ಮಾರ್ಕೆಟ್ ದರದಂತೆ ಹಣಪಾವತಿಸಿಕೊಂಡು ನಿವೇಶನ ನೀಡಲು ಸಾಮಾನ್ಯ ಸಭೆಯ ದಿನಾಂಕ:02-11-2009ರಲ್ಲಿ ತೀರ್ಮಾನಿಸಿರುವಂತೆ ಮಹಿಳಾ ವಿದ್ಯುತ್ ಕೈಮಗ್ಗ ಸಂಘದ ಪಕ್ಕ ಖಾಲಿ ಇರುವ 40X20 ಅಡಿಗಳ ನಿವೇಶನವನ್ನು ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ.10/10</u>

2009-10ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿ ಮತ್ತು ನಗರಸಭಾ ನಿಧಿಯಡಿಯಲ್ಲಿ ದಿನಾಂಕ:03-10-2009ರ ವಿಶೇಷ ಸಭೆಯ ವಿಷಯ ಸಂಖ್ಯೆ.1ರ ತೀರ್ಮಾನದಂತೆ ಮತ್ತು ಮಾನ್ಯ ಜಿಲ್ಲಾಧಿಕಾರಿಗಳವರಿಂದ ಅನುಮೋದನೆಗೊಂಡ ಕ್ರಿಯಾ ಯೋಜನೆಯ ದಿನಾಂಕ:15-10-2009 ಮತ್ತು 26-12-2009ರಂತೆ ಶೇ.22.75ರ ನಿಧಿಯಡಿಯಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿ ನಿಲಯಕ್ಕೆ ಅವಶ್ಯಕ ಸಾಮಗ್ರಿಗಳ ಸರಬರಾಜು ಮಾಡಲು ಕರೆದಿರುವ ಅಲ್ಪಾವಧಿ ಟೆಂಡರ್‌ನ್ನು ಅನುಮೋದಿಸುವ ವಿಚಾರ.

-8-

<u>ತೀರ್ಮಾನ ಸಂಖ್ಯೆ:10/10</u>

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು, ದೊಡ್ಡಬಳ್ಳಾಪುರ ರವರ ಪತ್ರ ಸಂಖ್ಯೆ.ತಾಸಕದೊ/ಲೆಕ್ಕ/ಸಿಆರ್/22/09-10 ದಿನಾಂಕ:27-01-2010ರ ಪತ್ರದಲ್ಲಿ ಶೇ.22.75ರ ನಿಧಿಯಡಿಯಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿ ನಿಲಯಕ್ಕೆ ಅವಶ್ಯಕ ಸಾಮಗ್ರಿಗಳ ಬೇಡಿಕೆ ಸಲ್ಲಿಸಿರುವುದರಿಂದ ಹಾಗೂ ನಗರ ವ್ಯಾಪ್ತಿಯಲ್ಲಿನ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿ ನಿಲಯಗಳನ್ನು ಮೇಲ್ದರ್ಜೆಗೇರಿಸುವುದಕ್ಕಾಗಿ ಕರೆದಿರುವ ಅಲ್ಪಾವಧಿ ಟೆಂಡರ್ ಸಿಂಗಲ್ ಟೆಂಡರ್‌ದಾರರಾದ ಗೌತಮ್ ಎಂಟರ್ ಪ್ರೈಸಸ್, ಮಾರುತಿನಗರ, ದೊಡ್ಡಬಳ್ಳಾಪುರ ರವರು ನಮೂದಿಸಿರುವ ದರವನ್ನು ಸಭೆಯಲ್ಲಿ ಒಪ್ಪಿಗೆ ನೀಡಿ ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ.10/11</u>

ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಅವಶ್ಯಕ ಔಷಧಿಗಳನ್ನು ಖರೀದಿಸುವ ವಿಚಾರ.

<u>ತೀರ್ಮಾನ ಸಂಖ್ಯೆ:10/11</u>

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಹಾಲಿ ಈಗ ಬೇಸಿಗೆ ಕಾಲವಾದ್ದರಿಂದ, ನಗರದಲ್ಲಿ ಸಾಂಕ್ರಾಮಿಕ ರೋಗಗಳು ಹರಡುವ ಸಂಭವ ಹೆಚ್ಚಾಗಿರುವುದರಿಂದ ಮುನ್ನಚ್ಚರಿಕೆ ಕ್ರಮವಾಗಿ ನಗರದ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಅವಶ್ಯಕ ಔಷಧಿಗಳನ್ನು ಖರೀದಿಸಲು ಸಭೆಯಲ್ಲಿ ಒಪ್ಪಿ ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ.10/12</u>

ಪ್ರಾಬಾತ್ ಸರ್ಕಸ್ ಕಂಪನಿಯವರು ಸರ್ಕಸ್ ನೆಡೆಸಲು ಪರವಾನಿಗೆ ಕೋರಿ ಬಂದಿರುವ ಅರ್ಜಿ ವಿಚಾರ.

<u>ತೀರ್ಮಾನ ಸಂಖ್ಯೆ:10/12</u>

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ನಗರದ ನಾಗರಕೆರೆಯಲ್ಲಿ ಖಾಲಿ ಇರುವ ಸ್ಥಳದಲ್ಲಿ ಸರ್ಕಸ್ ನೆಡೆಸಲು ಸ್ಥಳಾವಕಾಶ ಕಲ್ಪಿಸಿಕೊಡುವಂತೆ ಸಭೆಯಲ್ಲಿ ಒಪ್ಪಿ ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ.10/13</u>

ಬೇಸಿಗೆ ಕಾಲದಲ್ಲಿ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲು ಬಂದಿರುವ ಟೆಂಡರ್‌ಗಳಲ್ಲಿ ಕಡಿಮೆ ದರನಮೂದಿಸಿರುವ ಟೆಂಡರ್ ದರವನ್ನು ಅನುಮೋದಿಸುವ ವಿಚಾರ.

<u>ತೀರ್ಮಾನ ಸಂಖ್ಯೆ:10/13</u>

ಸದರಿ ವಿಷಯವನ್ನು ಚರ್ಚಿಸಲಾಗಿ ಬೇಸಿಗೆ ಕಾಲದಲ್ಲಿ ಟ್ಯಾಂಕರ್ ಮೂಲಕ ನಾಗರೀಕರಿಗೆ ಕುಡಡಿಯುವ ನೀರು ಒದಗಿಸಸಲು ಸಿ.ಆರ್.ಎಫ್. ನಿಧಿಯ ಅನುದಾನದಲ್ಲಿ ಟೆಂಡರ್ ಕರೆಯಲಾಗಿದ್ದು ಕಡಿಮೆ ದರ ನಮೂದಿಸಿದ ಶ್ರೀ ನಾಗರಾಜುರವರ ದರವನ್ನು ಅನುಮೋಧಿಸಲಾಯಿತು.

<u>ವಿಷಯ ಸಂಖ್ಯೆ:10/14</u>

ಅಧ್ಯಕ್ಷರು,ಉಪಾಧ್ಯಕ್ಷರು ಹಾಗೂ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳನ್ನೊಳಗೊಂಡ ತಂಡವು ಆಂಧ್ರಪ್ರದೇಶದ ಸೂರ್ಯಪೇಟೆಯ ಘನತ್ಯಾಜ್ಯ ವಿಲೇವಾರಿ ನಿರ್ವಹಣೆಯ ಸಂಬಂಧ ಅಧ್ಯಯನ ಪ್ರವಾಸ ಕೈಗೊಳ್ಳುವ ವಿಚಾರ.

**ತೀರ್ಮಾನ ಸಂಖ್ಯೆ:10/14**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಸರ್ಕಾರದ ಅಧಿಸೂಚನೆ ನಂ. ಯುಡಿಡಿ 1 ಟಿಎಂಎಸ್-2003, ದಿನಾಂಕ:03-02-2004ರಂತೆ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳನ್ನೊಳಗೊಂಡ ತಂಡವು ಆಂಧ್ರಪ್ರದೇಶದ ಸೂರ್ಯಪೇಟೆಯ ಘನತ್ಯಾಜ್ಯ ವಿಲೇವಾರಿ ಸಂಬಂಧ ಅಧ್ಯಯನ ಪ್ರವಾಸ ಕೈಗೊಳ್ಳಲು ಸಭೆಯಲ್ಲಿ ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

---

ಸಹಿ:-

(ಎನ್. ಮಲ್ಲಿಕಾರ್ಜುನ)

ಅಧ್ಯಕ್ಷರು,
ನಗರಸಭೆ ದೊಡ್ಡಬಳ್ಳಾಪುರ.

**“ನಕಲು ಪ್ರತಿ”**

ಪೌರಾಯುಕ್ತರು,
ನಗರಸಭೆ, ದೊಡ್ಡಬಳ್ಳಾಪುರ.